Regd No B G 155

5—10—1965

ಸತ್ಯವಾದಿ

49th Year
Satyavadi
DAILY
MYSORE 4.

ಸಂಸ್ಥಾಪಕರು — ಆರ್ಯವನಿ ನಂಸ್ಕೇದಾರ್ ಎಂ ವಿ ಸುಬ್ಬರಾಯುರು

ಸಂಪಾದಕರು — ಧರ್ಮಪ್ರಚಾರನಿರತ ಎಂ ಎಸ್ ಕೃಷ್ಣರಾವ್

2 ಪೈಸೆ

ವಿವಿಧ ವಿಷಯಗಳು

★

ಅಮೇರಿಕಾದಲ್ಲಿ 5 ಸಾವಿರ ಪುಟಿಹಿಳೆ ಯರು ಗರ್ಭನಿರೋಧ ಮಾತ್ರೆ ಸೇವನ ತ್ಯಜಿಸಿ ಗರ್ಭ ನೆರೋದ ಇಂದಕ್ಷಿಕ ತೆಗೆ ದು ಕೊಳ್ಳುತ್ತಿದ್ದಾರೆ

★

ಅಗತ್ಯ ಕೊತ್ವಾಲಿಯಲ್ಲಿರುವ ಹೋ ಶಜನಂದ್ರರು ಹಾವು ಕಡಿತವನ್ನು ಗುಣ ಪಡಿಸುವರೆಂದೂ ಕಡಿದ ವಿಷಯುವನ್ನು ಅವರಿಗೆ ಶಂತೀ ಮೂಲಕ ತಿಳಿಸಿದರೆ ಸಾ ಕೆಂದೂ ಹೇಳಲಾಗಿದೆ;

★

ನವದೆಹಲಿ— ನನಗೆ ಶಾಂತಿ ದೇಳು ಅದರೆ ಈ ಸಾರಿ ಪಾಕಿಸ್ತಾನದೊಡನೆ ಶಾಂತಿಯುತನನ್ನು ಮಂತ್ರಿನ ಮೇಲೆ ಎಂದು ಪ್ರಧಾನಿ ಶಾಸ್ತ್ರಿಗಳು ಹೇಳಿದರು

★

ನ್ಯೂಯಾರ್ಕ್— ರಕ್ಷಣಾ ಸಮಿತಿಯು ತನ್ನ ಶರಣಿನ ಬಗ್ಗೆ ಭಾರತ-ಪಾಕ್ ನೊಡನೆ ಮಾತುಕತೆ ನಡೆಸಲು ಸಮಿತಿಯು ನಾಲ್ಕು ಸದಸ್ಯರ ಸಮಿತಿ ನೇಮಿಸುವದನ್ನು ಭದ್ರಂತ ತಿಂಸ್ಥರಿಸಿದೆ.

★

ನವದೆಹಲಿ— ಪ್ರಧಾನಿಗಳ 61 ನೇ ಹುಟ್ಟಿದ ಹಬ್ಬಂದು ವ.ಥರಾ ಜಿಲ್ಲೆಯ ವ್ಯವಸಾಯಗಾರರು ರೂ 61000 ರಕ್ಷಣಾ ನಿಧಿಗೆ ಕೊಟ್ಟರೇ— ವಥುರಾ ಜಿಲ್ಲೆಯ ವಿವಿಧ ಸಂಸ್ಥೆಗಳ ಪರವಾಗಿ ರೂ 67000 ಅಂಡಲಾಯಿತು — ಪಂಜಾಬಿನ ಜನತೆ ಪರವಾಗಿ ಮುಖ್ಯಮಂತ್ರಿ ರಾವ್ ಕಿಷನ್ ರೂ 1 ಲಕ್ಷ ಮೌಲ್ಯದ 100 ಟನ್ ಮುಸೆಕಿನ ಜೋಳ ಮತ್ತು 50 ಟನ್ ಬೇಳೆ ಕೊಟ್ಟರು — ಗ್ವಾಲಿಯರ್ ವ ಹಾರಾಣಿಯವರು 200 ಗಿನಿ ಮತ್ತು 300 ಚಿನ್ನದನಾಣ್ಯ ಕೊಟ್ಟರು

★

ವಾರ್ತಾ ವಿಶೇಷಗಳು

❀

ನವದೆಹಲಿ— ಜಯಪುರದ ಮಹಾರಾಜರುನ್ನು ಸೈನಿನಲ್ಲಿ ಭಾರತ ರತ್ನ ಭಾರಿಯಾಗಿ ನೇಮಿಸಲಾಗಿದೆ

❀

ಪೂಂಚ್— ಟಿಕ್ಕಿ ರೇವುಗಳಲ್ಲಿ ಮೂರು ಪಾಕಿಸ್ತಾನಿ ಹಡಗುಗಳು ಪಾಕಿಸ್ತಾನನ್ನ ಆಯುಧ ಮತ್ತು ಮದ್ದುಗುಂಡು ತುಂಬಿಕೊಳ್ಳುತ್ತಿದ್ದುವೆಂದು ಪ್ರತಿಪಡವಾಗಿದೆ

●

ತಿರುವೇಂಡಂ— ಕೊತ್ತದುಂಗಲಂನಲ್ಲಿ ಸಿಕ್ಕಿರುವ ಒಂದು ರಾತಿ ನಾಣ್ಯಗಳಲ್ಲಿ 3 ಚಿನ್ನದವು ಓಮುಯಾಡ್ ಕಲೀಫರ ಕಾಲದ್ದೆಂದು ಅಭಿಪ್ರಾಯಪಡಲಾಗಿದೆ.

■

ಭಾರತಕ್ಕೆ ಬರಬೇಕಾದ ಟಪಾಲು ಮತ್ತು ಇತರ ಸಂಕುಗಳನ್ನು ಪಾಕೀ ಸ್ತಾನವು ಕರಾಚಿಯಲ್ಲಿ ಇಳಿಸಿಕೊಳ್ಳುತ್ತಿದೆ

❀

ಭಾರತವು ಅಣು ಬಾಂಬು ತಯಾರಿ ಸಕೂಡದೆಂದು ಮುಂರಾರ್ಜಿ ದೇಸಾಯಿ ರವ್ಹಂನಲ್ಲಿ ತಿಳಿಸಿದರು

★

ಚೀನಾ, ಇಂಡೋನೇಷಿಯಾ ದಂಗೆ ಕೋರರಿಗೆ ಆಯುಧ ಸಂಬರಾಜುಮಾಡುತ್ತಿದೆ ಎಂದು ವಲೆ ಸ್ಯ ರೇಡಿಯೋ ವರದಿ

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ

ಅಸ್ಥಾನವಿದ್ವಾನ್ ಧರ್ಮಾಧಿಕಾರಿ ರಾಜಕಾರ್ಯಾಸಕ್ತ, ಜ್ಯೋತಿರ್ವಿದ್ಯಾಪ್ರವೀಣ ಸಂದಕೃಷ್ಣಜೋಯಿ ಸಂವರಿಂದ

6 ಬುಧವಾರ ಏಕಾದಶಿ ಧನಿಷ್ಠ

ಒಂದು ಅಂಗುಲ ನೆಲ ಬಿಡುವುದಿಲ್ಲ

ಮದರಾಸು— ಭಾರತವು ತನ್ನ ರಕ್ಷಣೆಗೆ ಅವಶ್ಯವಾದ ಎಲ್ಲಾ ವಿ.ಲಿಟರಿ ಸಲಕರಣೆಗಳನ್ನು ತಯಾರಿಸಬೇಕೆಂದೂ, ಬೇರೆ ಮಾರ್ಗವಿಲ್ಲವೆಂದೂ ಕಾಂಗ್ರೆಸ್ ಅಧ್ಯಕ್ಷ ಕಾಮರಾಜರು ಹೇಳಿದರು — ಕಾಶ್ಮೀರವು ಭಾರತದ ಒಂದು ಭಾಗವೆಂದೂ ಅದನ್ನೆಂದಿಗೂ ಪಾಕಿಸ್ತಾನ ಪಡೆಯಲು ಆಗುವುದಿಲ್ಲವೆಂದೂ ಹೇಳಿದರು.

ನವದೆಹಲಿ— ಪಾಕಿಸ್ತಾನವು ಕದನ ವಿರಾಮವನ್ನು ನಿರ್ಲಕ್ಷಿಸುತ್ತಲಿದೆ ; ಪಯೂಲುಕೋಟೆ ಸೆಕ್ಟರಿನಲ್ಲಿ ತನ್ನ ಸ್ಥಾನವನ್ನು ಭದ್ರಗೊಳಿಸುತ್ತಿದೆ : 3 ದಿನಗಳಿಂದ ಪಯೂಲುಕೋಟೆಯಿಂದಾ ವ ಹಾಜಕೆಗೆ ಮೂರು ಪಾಕಿಸ್ತಾನಿ ವಿಮಾನಗಳು ಓಡಾಡಿದವು ; ಲಾಹೋರು ಸೆಕ್ಟರಿನಲ್ಲಿ ತನ್ನ ರಕ್ಷಣೆಯನ್ನು ಭದ್ರಗೊಳಿಸಿಕೊಳ್ಳುತ್ತಿದೆ

ಕೊಯಮತ್ತೂರಿನಲ್ಲಿ ಶೃಂಗೇರಿಯ ಜಗದ್ಗುರು ಶ್ರೀ ಶಂಕರಾಚಾರ್ಯರ ಹೆಸರಿನಲ್ಲಿ ಸ್ಥಾಪಿಸಲಾಗಿರುವ ತಾಂತ್ರಿಕ ತರಬೇತಿ ಶಾಲೆಯನ್ನು ದ್ರಾವಿಡ ಕಳಗಂ ನಾಯಕ ಶ್ರೀ ಇ ವಿ ರಾಮಸ್ವಾಮಿ ನಾಯಕರು ಉದ್ಘಾಟಿಸಿದರು

ಮೇವು-ಕರಿನಿಂದ ಉತ್ತರಕ್ಕೆ ಇರುವ ಸಂಬತ್ರ ಎಂಬ ಗಾ ಮಕ್ಕೆ ಪಾಕೀಸ್ತಾನಿಗಳು ಬೀಕಿ ಹಚ್ಚಿದ್ದಾರೆ

ಜಯಸಾಲ್ಮರ್ ಜಿಲ್ಲೆ ಗಡಿ ಪ್ರದೇಶದಲ್ಲಿ ಪಾಕೀಸ್ತಾನಿಗಳು ಕೊಳ್ಳೆ, ಲೂಟಿ ಮಾಡಿದ್ದಾರೆ

ಅಭಿನಂದನೆಗಳು

ಮೈಸೂರು ವಿಧಾನಸಭಾಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿರುವ ಶ್ರೀ ಡಿ ಲಿಂಗಯ್ಯನವರಿಗೂ, ಉಪಾಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿರುವ ಶ್ರೀ ದೊಡ್ಡತಮ್ಮಯ್ಯನವರಿಗೂ ಸತ್ಯವಾದಿಯ ಅಭಿನಂದನೆಗಳು

ರಕ್ಷಣಾ ಮಂತ್ರಿ ಶ್ರೀ ವೈ ಬಿ ಚವಾಣರು ಬೊಂಬಾಯಿನಲ್ಲಿ ನೆನ್ನೆ ಮಾತನಾಡುತ್ತಾ, ಭಾರತವು ಕಾಶ್ಮೀರದಲ್ಲಿ ಇಂದಂಗುಲ ನೆಲವನ್ನಾಗಲಿ ಬಿಟ್ಟುಕೊಡಲು ಸಿದ್ಧವಿಲ್ಲವೆಂದು ತಿಳಿಸಿದರು

■

ಪ್ರಮುಖ ವಾರ್ತೆಗಳು

ಸುಮಾರು ಮೂವತ್ತು ನಲವತ್ತು ಮಂದಿ ಚೀನ ಸೈನಿಕರು ಭಾರತ ಪ್ರದೇಶದಲ್ಲಿರುವ ಯಾಕ್ತಾ ಕಣಿವೆ ವರೆಗೆ ನುಗ್ಗಿ ಕೆಲವು ಸ್ಥಾನಗಳನ್ನು ವಶಪಡಿಸಿಕೊಂಡರು. ಗುಂಡಿನ ವಿನಿಮಯ ಆದನಂತರ ಅವರು ವಾಪಸಾದರು

○ ○

ಯಾವ ಪ್ರಚೋದನೆಯೂ ಇಲ್ಲದೆ ಲಾಟಿತಿಲ್ಲ ದಮಾಬಾರಿ ಪ್ರದೇಶದಲ್ಲಿ ಪಾಕೀಸ್ತಾನ ಸೈನಿಕರು ಮೊನ್ನೆ ರಾತ್ರಿ ಗುಂಡು ಹಾರಿಸಿದರು ಆಕ್ರಮಣಕಾರಿ ಗುಂಡು ಹಾರಿಸಿದರು

○ ○

ಬಿಯೋನಿಯಲ್ಲಿ ಭಾರತ ಅಧ್ಯಕ್ಷ ಡಾ|| ರಾಧಾಕೃಷ್ಣನರ ಗೌರವಾರ್ಥ ಮೊನ್ನೆ ಏರ್ಪಡಿಸಿದ್ದ ಸತ್ಕಾರಕೂಟದಲ್ಲಿ ಯುಗಾಸ್ಲೊವಿಯ ಅಧ್ಯಕ್ಷ ಮಾ|| ಟೀಟೋ ಭಾಷಣ ಮಾಡುತ್ತಾ, ಚೀನ ನಾಯಕರ ಆಕ್ರಮಣಕಾರಿ ಮನೋಭಾವ ಈ ಬಾರಿಯೂ ಕೂಡ ಭಾರತದ ಮೇಲೆ ಬಲಪ್ರಯೋಗ ಮಾಡುವುದರಲ್ಲಿ ಯಶಸ್ವಿಯಾಗಿದೆ ಎಂದರು

○ ○

ಪೆಂಥಾಂ ಮತ್ತು ಹಾಜಪೀರ ವಿಭಾಗಗಳಲ್ಲಿ ಪಾಕೀಸ್ತಾನಿಗಳು ಭಾರತೀಯ ಕಾಣ್ಯಗಳ ಮೇಲೆ ಗುಂಡು ಹಾರಿಸುತ್ತಿರುವರು

ಯಾರನು ವಿವಾಹವಾಗಬೇಕು ?

— ಕೈರೋ ನಿರ್ಧಾರವಿದು —

★

ಕಮ್ಯೂನಿಸ್ಟರೊಡನೆ ಮುಸ್ಲಿಂ ಹುಡುಗಿಯರ ವಿವಾಹ ಕೂಡದು, ಎಂಬ ಕೆಲವು ದಿವಸಗಳ ಹಿಂದೆ ಎ. ಬಿ. ಪತ್ರಿಕೆಯಲ್ಲಿ ಪ್ರಕಟವಾದ ವಂದಿ—

ಸಂಯುಕ್ತ ಅರಬ್ ಪ್ರಜಾರಾಜ್ಯದಲ್ಲಿನ ಉನ್ನತ ಇಸ್ಲಾಂ ಅಧಿಕಾರಿಯು ಮುಸ್ಲಿಂ ಹುಡುಗಿಯರು ಕಮ್ಯೂನಿಸ್ಟರನ್ನು ವಿವಾಹವಾಗಬಾರದೆಂದು ನಿರ್ಧಾರ ವಿತ್ತಿರುವರು— ಎಂಬುದಾಗಿ ಕೈರೋಪತ್ರಿಕೆಗಳು ಇತ್ತೀಚೆಗೆ ಪ್ರಕಟಿಸಿವೆ.

ಇದು ಸಾವಿರ ವರ್ಷಗಳ ಪುರಾತನವಾದ ಮುಸೀದಿ ಮತ್ತು ವಿಶ್ವವಿದ್ಯಾಲಯವೂ ಆದ ಅಲ್ ಹಜಾರ್‌ನ ನ್ಯಾಯಾಂಗ ಸಮಿತಿಯು ನಿರ್ಧಾರವಾಗಿದೆ

ಒಬ್ಬ ಮುಸ್ಲಿಂ ತಂದೆಯು, ತನ್ನ ಮಗಳು ಮುಸ್ಲಿಂ ಸಂಸ್ಥಾಂದ ಅದರೆ ಬದ್ಧ ಕಮ್ಯೂನಿಸ್ಟನಾದವನನ್ನು ವರಿಸಬಹುದೇ, ಎಂದು ಕೇಳಿದ ಪ್ರಶ್ನೆಗೆ ಈ ತೀರ್ಪು ಕೊಡಲಾಯಿತು

ಕಮ್ಯೂನಿಜಂ ದೇವರಲ್ಲಿ ನಂಬಿಕೆಯಿಲ್ಲದ ಪಾಪಂಚಿಕ ಸಿದ್ಧಾಂತವಾಗಿದೆ : ಅದು ವರ್ಗಗಳನ್ನು ಮೂಢನಂಬಿಕೆ ಎಂದು ನಿಂದಿಸುತ್ತಾರೆ. ತಾನು ಕಮ್ಯೂನಿಸ್ಟನೆಂದು ಒಪ್ಪಿಕೊಂಡವನನ್ನು ಇಸ್ಲಾಂನಲ್ಲಿ, ಸ್ವಧರ್ಮಬಿಟ್ಟವನು, ಪತಿತ ಎಂಬುದಾಗಿ ಭಾವಿಸಲ್ಪಡುತ್ತಾನೆ. ಆದರಿಂದ ಮುಸ್ಲಿಂ ಮಹಿಳೆಗೂ ಕಮ್ಯೂನಿಸ್ಟನಿಗೂ ವಿವಾಹವು ಪರಸ್ಪರ ವಿರೋಧವಾದುದಾಗಿದೆ, ಎಂದು ತೀರ್ಪಿನಲ್ಲಿ ತಿಳಿಸಲಾಗಿದೆ

† ಇದು ಹೇಗಿರಬೇಕೋ ಹಾಗಿದೆ ತಾವು ಇಚ್ಛಿಸಿದವರನ್ನು ಮದುವೆಯಾಗುವುದು, ಅಥವಾ ಇತರ ಕಾರಣಗಳಿಗಾಗಿ ಅವನನ್ನೇ ಇಚ್ಛಿಸುವುದು ಹೇಗಿದ್ದರೂ, ಅವನು ದೇವರಲ್ಲಿ ನಂಬಿಕೆಯಿಲ್ಲದವನು, ನಾಸ್ತಿಕನಾಗಿರುವುದರಿಂದ ವರಿಸುವುದು ತಪ್ಪು ಮತ್ತು ಮತೀಯ ನಾಯಕರು ಅದನ್ನು ಖಂಡಿಸುವುದರಲ್ಲಿ ಬುದ್ಧಿಮತಿಕೆಯಿಂದ ತೀರ್ಮಾನಿಸಿದ್ದಾರೆ.

ವೈಜ್ಞಾನಿಕವಾಗಿರುವ ಹಿಂದೂ ಧರ್ಮವು. ಈ ದಾಂಪತ್ಯ ಸರಿಯೇ ಸರಿಯಲ್ಲವೇ ಎಂಬುದು ತಾಯಿತಂದೆಗಳಿಂದ ಜಾಗರೂಕತೆಯಿಂದ ಪರೀಕ್ಷಿಸಲ್ಪಡಬೇಕೆಂದೂ, ಒಂದು ಪದ್ಧತಿಯು ಶಾಸ್ತ್ರ ಹೇಳಿಕೆಯನ್ನು ಉಲ್ಲಂಘಿಸಿ ದೇವರ ವಿರುದ್ಧ ಹೋಗಿದ್ದಾರೆಯೇ ಎಂಬುದನ್ನು ಅವರಿಂದ ಪರೀಕ್ಷಿಸಲ್ಪಡಬೇಕೆಂದೂ ಆಜ್ಞೆ ಮಾಡಿದೆ

ದೇವರನ್ನು ಲೆಕ್ಕಿಸದ ವಿವಾಹಗಳು ಅಧಾರ್ಮಿಕವು ಮತ್ತು ಅದನ್ನು ವಿವಾಹವೆಂದು ಲೆಕ್ಕಿಸಲಾಗದು. — Truth

★

॥ ಓಂ ॥

ಓಂ ಶ್ರೀ ಶ್ರೀ ಬಾಬಾ ತಿಂಡಿ, ಶ್ರೀ ಶ್ರೀ ಬಾಬಾ ತಿಂಡಿ
ಓಂ ಶ್ರೀ ಶ್ರೀ ಬಾಬಾ ತಿಂಡಿ ಶ್ರೀ ಶ್ರೀ ಬಾಬಾ ತಿಂಡಿ
ಓಂ ಶ್ರೀ ಶ್ರೀ ಬಾಬಾ ತಿಂಡಿ ಶ್ರೀ ಶ್ರೀ ಬಾಬಾ ತಿಂಡಿ

ಎಂಬುದು ಸತ್ಯಸಂಗತಿಯು ಓಂ ಶ್ರೀ ಶ್ರೀ ಸಾಯಿಬಾಬಾ ತಿಂಡಿ

[ಬರೆದು ಬಂಡದ್ದು] ಪುಟ್ಟಪರ್ತಿ

Help The Gorakshana

ಗೋರಕ್ಷಣೆಗೆ ಬೆಂಬಲ ನೀಡಿ

ವಿಳಾಸ— ಗೋರಕ್ಷಣ ಆಫೀಸು, ಚಾಮರಾಜಪುರಂ, ಮೈಸೂರು 4

ವುಡಲ್ಯಾಂಡ್ಸ್ ಜನಪ್ರಿಯತೆ 2 ನೇ ವಾರ

ಆವೊ ಪ್ಯಾರ್ ಕರೆ (ಹಿಂದಿ)

Aao Pyar Karen

ಜಾಹೂ ಮುಖರ್ಜಿ — ಸೈರಾ ಬಾನು ರವರ ಕಲಾತ್ಮಕ ನಟನೆ

ಆಕರ್ಷಣೀಯ ಅಭಿನಯದಿಂದ ಕೂಡಿದ ಸುಂದರ ಹಿಂದಿ ಚಿತ್ರ

ಪ್ರತಿ ದಿನ 3 ಪ್ರದರ್ಶನಗಳು

ಅಪೆರ— 1-10-65 ರಿಂದ

ಪತಿಜಾ ಪಾಲನ (ತೆಲುಗು)

ಪಾತ್ರ— ಕಾಂತಾರಾವ್, ರಾಜನಾಲ, ಪದ್ಮನಾಭಂ, ರಾಜಶ್ರೀ, ವಿಜಯಲಕ್ಷ್ಮಿ

[ದಿನ 3 ಆಟಗಳು]

SHAKTI SUDHA

A Superb Tonic

Quality Printing — Neat Binding

Lakshminarasimha Press

Sivarampet, Mysore

ಆಶೋಕ ಏಜೆನ್ಸೀಸ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಆಯುರ್ವೇದ ಔಷಧಿಗಳೂ ನಮ್ಮಲ್ಲಿ ದೊರೆಯುತ್ತವೆ

ರೋಗಿಗಳಿಗೆ ಸೂಕ್ತ, ಔಷಧಿ ಕೊಡಲಾಗುತ್ತದೆ

Protect the Cow

ಗೋರಕ್ಷಣೆ ಮತ್ತು ಜೀವಕಾರುಣ್ಯದ ಕಾರ್ಯಕ್ರಮಗಳು ಹೆಚ್ಚಿಚ್ಚಾಗಿ ನಡೆಯಲಿ

Edited, Printed & Published by Dharma prachara niratha
M S Krishna Rao (Proprietor) at the Satyavadi Press
Chamarajapuram, Mysore 4